ಶ್ರೀ ಎನ್.ಎ.ಹ್ಯಾರೀಸ್: ಇದನ್ನು ಯಾರಿಗೋಸ್ಕರ ತರುವುದು ಸರ್?

ಅದ್ಯಕ್ಷರು: ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್. ಸುರೇಶ್‌ಕುಮಾರ್ (ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು): ಮಾನ್ಯ ಸಭಾಧ್ಯಕ್ಷರೆ, ದಿನಾಂಕ: 06-02-2013 ರ 1 ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 39 ಪ್ರಶ್ನೆಗಳ ಪೈಕಿ 34 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಆಧ್ಯಕ್ಷರು: ಮಂಡಿಸಲಾಯಿತು.

(ಅನುಬಂಧ -1)

2. ಸಭೆಯ ಮುಂದಿಡಲಾಗುವ ಕಾಗದಪತ್ರಗಳು

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಕಾಗದ ಪತ್ರವನ್ನು ಮಂಡಿಸುವುದು.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):
(ಶ್ರೀ. ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಮಾನ್ಯ ಅಧ್ಯಕ್ಷರು)

1979ರ ಕರ್ನಾಟಕ ವಿಲಾಸಿ ತೆರಿಗೆ ಅಧಿನಿಯಮ ಕಲಂ 20(ಎ)ರ ಮೇರೆಗೆ:

1. 1979ರ ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ ಆಧಿನಿಯಮದಡಿ ಮಾಲೀಕನು ಯಾವುದೇ ವ್ಯಾಪಾರ ಅಥವಾ ಕೈಗಾರಿಕೆಯನ್ನು ಉತ್ತೇಜಿಸಲು ಸ್ಥಾಪಿಸಿದ ಸಂಸ್ಥೆಯೊಂದರ ಮೂಲಕ ಕೈಗಾರಿಕಾ ಪ್ರದರ್ಶನಗಳನ್ನು ವ್ಯವಸ್ಥೆ ಮಾಡುವುದಾಗಿ ಮದುವೆ ಭವನ ಮತ್ತು ಕೈಗಾರಿಕಾ ಪ್ರದರ್ಶನಗಳು ಮತ್ತು ಸಮ್ಮೇಳನಗಳಿಗಾಗಿ ಮಾತ್ರ ಬಳಸುವ ಆವರಣಗಳಲ್ಲಿ ಇಡಲಾದ ಭೋಗ ವಸ್ತುಗಳ ಮೇಲೆ ಶುಲ್ಕಗಳ ಸಂಬಂಧ ಪಾವತಿಸಬೇಕಾದ ತೆರಿಗೆಯನ್ನು ತತ್‌ಕ್ಷಣದಿಂದಲೇ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 27.7.2012ರಂದು ಹೊರಡಿಸಲಾದ ಆಧಿಸೂಚನೆ ಸಂಖ್ಯೆ ಆಇ 3 ಸಿಎಲ್‌ಟಿ 2012

1999ರ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧಿನಿಯಮ) ಕಲಂ 25(2)ರನ್ವಯ

2 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧಿನಿಯಮ 1999ರಡಿ ಮಾಡುವ ಸರಕುಗಳ ಮತ್ತು ಸೇವೆಗಳ ಸಂಗ್ರಹಣೆಗಾಗಿ ಹಾಗೂ ನಿರ್ಮಾಣ ಕಾಮಗಾರಿಗಳ ನಿರ್ವಹಣೆಗಾಗಿ 18ಎ ಪ್ರಕರಣದ (2)ನೇ ಉಪಪ್ರಕರಣವನ್ನು, ಕರ್ನಾಟಕ ಸಾಮಾನ್ಯ ಖಂಡಗಳ ಆಧಿನಿಯಮ 1999ರ 21ನೇ ಪ್ರಕರಣದೊಂದಿಗೆ ಓದಿಕೊಂಡಂತೆ ಈ ಹಿಂದೆ ಹೊರಡಿಸಲಾಗಿದ್ದ 104 ನಿರ್ದಿಷ್ಟಪಡಿಸಲಾದ ಆಧಿಸೂಚನೆಗಳನ್ನು ರದ್ದುಗೊಳಿಸಿ ಸದರಿ ಆಧಿನಿಯಮದಡಿ ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ಸಂಗ್ರಹಣೆ ಸಂಸ್ಥೆಗಳು ರೂ. 5.00 ಲಕ್ಷಗಳಿಗೆ ಮೀರಿದ ಮೌಲ್ಯವನ್ನು ಹೊಂದಿರುವ ಪ್ರತಿಯೊಂದು ಸಂಗ್ರಹಣೆಯ ಸಂಬಂಧದಲ್ಲಿ ವಿದ್ಯುನ್ಮಾನ

ಸಂಗ್ರಹಣಾ ವೇದಿಕೆಯ ಮೂಲಕವೇ ತಮ್ಮ ಸಂಗ್ರಹಣೆಗಳನ್ನು ಸಂಗ್ರಹಿಸತಕ್ಕದ್ದೆಂದು ದಿನಾಂಕ 09.10.2012ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 2 ಇ ಸಂಗ್ರ 2009

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ ಪ್ರಕರಣದ 8(3)ರ ಮೇರೆಗೆ:

1. ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996ರ ನಿಯಮ 2 ಹಾಗೂ 3ಕ್ಕೆ ತಿದ್ದುಪಡಿ ಮಾಡಿ ದಿನಾಂಕ 11.07.2012ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಸಿಆಸುಇ 55 ಸೇಅನೇ 2012 ನ್ನು ಮಂಡಿಸುವುದು.

2. ಕರ್ನಾಟ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996ರ ನಿಯಮ 1ಕ್ಕೆ ತಿದ್ದುಪಡಿ ಹಾಗೂ 3ಅ ಸೇರ್ಪಡೆ ಮಾಡಿ ದಿನಾಂಕ 13.10.2011ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ. ಸಿಆಸುಇ 78 ಸೇಅನೇ 2011

3. ಕರ್ನಾಟಕ ಸಿವಿಲ್ (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇಮಕಾತಿ ಹಾಗೂ ಆಯ್ಕೆ) (ಸಾಮಾನ್ಯ) ನಿಯಮಗಳು 2006ರ ನಿಯಮ 8, 9 ಹಾಗೂ 10ಕ್ಕೆ ತಿದ್ದುಪಡಿ ಮಾಡಿ ದಿನಾಂಕ 29.10.2011ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ. ಸಿಆಸುಇ 26 ಸೇವನೆ 2011

4. 1978ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ (1990 ಕರ್ನಾಟಕ ಅಧಿನಿಯಮ 14) 3ನೇ ಪ್ರಕರಣದ 2ನೇ ಉಪ ಪ್ರಕರಣದ (ಎ) ಖಂಡದ ಮೂಲಕ ಅನುಸೂಚಿಯ ತಿದ್ದುಪಡಿ ಮಾಡಿ ದಿನಾಂಕ 20.11.2012ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ. ಸಿಆಸುಇ 88 ಸೇನಿಡಿ 2012.
5. ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996ರ ನಿಯಮ 4 ಹಾಗೂ 5ಕ್ಕೆ ತಿದ್ದುಪಡಿ ಮಾಡಿ ದಿನಾಂಕ 18.10.2012ರಂದು ಹೊರಡಿಸಲಾದ ಅಧಿಸೂಚನೆ ಸಂಖೆಯ ಸಿಆಸುಇ 90 ಸೇಆನೇ 2012ಗಳನ್ನು ಮಂಡಿಸುತ್ತಿದ್ದೇನೆ.

ಅಧಿಸೂಚನೆ–1

ಕರ್ನಾಟಕ ಭೋಗವಸ್ತುಗಳ ಮೇಲೆ ತೆರಿಗೆ ಅಧಿನಿಯಮ, 1970ರ (ಕರ್ನಾಟಕ ಅಧಿನಿಯಮ 1979ರ 22) 12ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಿಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ, ಮಾಲೀಕನು ಯಾವುದೇ ವ್ಯಾಪಾರ ಅಥವಾ ಕೈಗಾರಿಕೆಯನ್ನು ಉತ್ತೇಜಿಸಲು ಸ್ಥಾಪಿಸಿದ ಸಂಸ್ಥೆಯೊಂದರ ಮೂಲಕ ಕೈಗಾರಿಕಾ ಪ್ರದರ್ಶನಗಳನ್ನು ವ್ಯವಸ್ಥೆ ಮಾಡುವುದಕ್ಕಾಗಿ ಮದುವೆ ಭವನ ಮತ್ತು ಕೈಗಾರಿಕಾ ಪ್ರದರ್ಶನಗಳು ಮತ್ತು ಸಮ್ಮೇಳನಗಳಿಗಾಗಿ ಮಾತ್ರ ಬಳಸುವ ಆವರಣಗಳಲ್ಲಿ ಇಡಲಾದ ಭೋಗ ವಸ್ತುಗಳ ಮೇಲೆ ಶುಲ್ಕಗಳ ಸಂಬಂಧ ಸದರಿ ಅಧಿನಿಯಮದ ಮೇರೆಗೆ ಪಾವತಿಸಬೇಕಾದ ತೆರಿಗೆಯನ್ನು ತತ್‌ಕ್ಷಣದಿಂದಲೇ ಜಾರಿಗೆ ಬರುವಂತೆ ವಿನಾಯಿತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಹೆಸರಿನಲ್ಲಿ

ಅಧಿಸೂಚನೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, **1999**ರ (**20000**ರ ಕರ್ನಾಟಕ ಅಧಿನಿಯಮ ಸಂಖ್ಯೆ: **29)18**–ಎ ಪ್ರಕರಣದ (**2**)ನೇ ಉಪಪ್ರಕರಣವನ್ನು ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, **1899(1899**ರ ಕರ್ನಾಟಕ ಅಧಿನಿಯಮ ಸಂಖ್ಯೆ: **III**ರ **21**ನೇ ಪ್ರಕರಣದೊಂದಿಗೆ ಓದಿಕೊಂಡಂತೆ, ಇವುಗಳ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಈ ಸಂಬಂಧದಲ್ಲಿ ಹೊರಡಿಸಿರುವ, ಈ ಅಧಿಸೂಚನೆಯ ಅನುಬಂಧದಲ್ಲಿ ನಿರ್ದಿಷ್ಟಪಡಿಸಲಾದ ಅಧಿಸೂಚನೆಗಳನ್ನು ರದ್ದುಗೊಳಿಸಿ, ಅದರಿ ಅಧಿನಿಯಮದ ಅಡಿಯಲ್ಲಿ, ರೂ. **5.00** ಲಕ್ಷಗಳಿಗೆ (**5.00** ಲಕ್ಷ ರೂಪಾಯಿಗಳು) ಮೀರಿದ ಮೌಲ್ಯವನ್ನು ಹೊಂದಿರುವ ಪ್ರತಿಯೊಂದು ಸಂಗ್ರಹಣೆಯ ಸಂಬಂಧದಲ್ಲಿ ಎಲ್ಲಾ ಸಂಗ್ರಹಣಾ ಸಂಸ್ಥೆಗಳು **(all procurement entities) 2012**ರ ಡಿಸೆಂಬರ್ 3ನೇ ದಿನಾಂಕದಿಂದ ಜಾರಿಗೆ ಬರುವಂತೆ, ವಿದ್ಯುನ್ಮಾನ ಸಂಗ್ರಹಣಾ ವೇದಿಕೆಯ ಮೂಲಕವೇ ತಮ್ಮ ಸಂಗ್ರಹಣೆಗಳನ್ನು ಸಂಗ್ರಹಿಸತಕ್ಕದ್ದೆಂದು, ಕರ್ನಾಟಕ ಸರ್ಕಾರವು ಈ ಮೂಲಕ ನಿರ್ದಿಷ್ಟಪಡಿಸುತ್ತದೆ.

ಅನುಬಂಧ

ಕ್ರ. ಸಂ.	ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ	ಕಾಲಂ 2ರಲ್ಲಿ ನಮೂದಿಸಿದ ಅಧಿಸೂಚನೆ ಯಾವ ಇಲಾಖೆ/ಸಂಸ್ಥೆಗೆ ಸಂಬಂಧಿಸಿದಿಯೋ, ಅದರ ಹೆಸರು.	ಇ–ಸಂಗ್ರಹಣಾ ವೇದಿಕೆಯನ್ನು ಬಳಸಲು ಕಾಲಂ 2ರಲ್ಲಿ ನಮೂದಿಸಿದ ಅಧಿಸೂಚನೆಯ ನ್ವಯ ನಿಗದಿಪಡಿಸಿದ ಕನಿಷ್ಠ ಸಂಗ್ರಹಣಾ

			ಮೌಲ್ಯ
1	2	3	4
1	ಸಿಆಸುಇ 26 ವಿಮಾಅ2003 (ಭಾ-1)ದಿನಾಂಕ: 13..11.2007	ಸರ್ವ ಶಿಕ್ಷಣ ಅಭಿಯಾನ (ಎಸ್‌ಎಸ್‌ಎ)	ರೂ. 50.00 ಲಕ್ಷಕ್ಕೂ ಮೀರಿದ
2	ಸಿಆಸುಇ 26ವಿಮಾಅ 2003(ಬಾ-	ಕರ್ನಾಟಕ ರಾಜ್ಯ ಡ್ರಗ್ಸ್ ಲಾಜಿಸ್ಟಿಕ್ ಮತ್ತು	ರೂ. 50.00ಲಕ್ಷಕ್ಕೂ
	1)ದಿನಾಂಕ: 4.12.2007	ಉಗ್ರಾಣ ಸಂಸ್ಥೆ (ಕೆಡಿಎಲ್‌ಡಬ್ಲ್ಯೂ ಎಸ್)	ಮೀರಿದ
3	ಸಿಆಸುಇ 26 ವಿಮಾಅ 2003 (ಭಾ-1)ದಿನಾಂಕ:26.12.2007	ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್)	ರೂ. 50.00 ಲಕ್ಷಕ್ಕೂ ಮೀರಿದ
4	ಸಿಆಸುಇ 26ವಿಮಾಅ 2003(ಬಾ-1)ದಿನಾಂಕ:26.12.2007	ಕರ್ನಾಟಕ ರಸ್ತೆ ಅಭಿವೃದ್ಧಿ ನಿಮಗ ನಿಯಮಿತ (ಕೆಆರ್ ಡಿಸಿಎಲ್)	ರೂ. 50.00ಲಕ್ಷಕ್ಕೂ ಮೀರಿದ
5	ಸಿಆಸುಇ 26ವಿಮಾಅ 2003(ಬಾ-1)ದಿನಾಂಕ:26.12.2007	ಕರ್ನಾಟಕ ರಾಜ್ಯ ಕೃಷಿ ಮಾರುಕಟ್ಟೆ ಮಂಡಳಿ ಮತ್ತು ಎಪಿಎಮ್‌ಸಿಗಳು	ರೂ. 50.00ಲಕ್ಷಕ್ಕೂ ಮೀರಿದ
6	ಸಿಆಸುಇ 26ವಿಮಾಅ 2003(ಬಾ-	ಕರ್ನಾಟಕ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ	ರೂ. 50.00ಲಕ್ಷಕ್ಕೂ

	1)ದಿನಾಂಕ:17.01.2008	ಯೋಜನೆ (ಹಳೆಯ ಅಧಿಸೂಚನೆ ಸಂ: ಸಿಆಸುಇ 26 ವಿಮಾಆ 2003 (ಭಾ–1) ದಿನಾಂಕ: 26.12.2007)	ಮೀರಿದ
7	ಸಿಆಸುಇ **26**ವಿಮಾಅ **2003**(ಬಾ–1)ದಿನಾಂಕ:28.01.2008	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)	ರೂ.**10.00** ಲಕ್ಷಕ್ಕೂ ಮೀರಿದ
8	ಸಿಆಸುಇ **26**ವಿಮಾಅ **2003**(ಬಾ–1)ದಿನಾಂಕ:28.01.2008	ಇ-ಆಡಳಿತ ಕೇಂದ್ರ (ಸಿಇಜಿ) ಬೆಂಗಳೂರು	ರೂ.**10.00**ಲಕ್ಷಕ್ಕೂ ಮೀರಿದ
9	ಸಿಆಸುಇ **26**ವಿಮಾಅ **2003**(ಬಾ–1)ದಿನಾಂಕ:04.03.2008	ರಾಷ್ಟ್ರೀಯ ಹೆದ್ದಾರಿಗಳ ಇಲಾಖೆ	ರೂ. **50.00**ಲಕ್ಷಕ್ಕೂ ಮೀರಿದ
10	ಸಿಆಸುಇ **26**ವಿಮಾಅ **2003**(ಬಾ–1)ದಿನಾಂಕ:04.03.2008	ಕರ್ನಾಟ ರಾಜ್ಯ ಉಗ್ರಾಣ ನಿಮಗ ನಿಯಮಿತ	ರೂ. **50.00**ಲಕ್ಷಕ್ಕೂ ಮೀರಿದ
11	ಸಿಆಸುಇ **26**ವಿಮಾಅ **2003**(ಬಾ–1)ದಿನಾಂಕ:09.06.2008	ಕರ್ನಾಟಕ ಸೋಪ್ಸ್ ಮತ್ತು ಡಿಟಜೆಂಟ್ಸ್ ಲಿ.,	ರೂ.**10.00** ಲಕ್ಷಕ್ಕೂ ಮೀರಿದ
12	ಸಿಆಸುಇ **26**ವಿಮಾಅ **2003**(ಬಾ–1)ದಿನಾಂಕ:29.08.200	ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ	ರೂ. **50.00**ಲಕ್ಷಕ್ಕೂ ಮೀರಿದ

	8		
13	ಸಿಆಸುಇ **26**ವಿಮಾಅ **2003**(ಬಾ–1)ದಿನಾಂಕ:09.09.2008	ಇನ್ಸ್‌ಪೆಕ್ಟರ್ ಜನರಲ್ ಆಫ್ ರಿಜಿಸ್ಟ್ರೇಷನ್ ಹಾಗೂ ಮುದ್ರಾಂಕ ಆಯುಕ್ತರು	ರೂ. **10.00**ಲಕ್ಷಕ್ಕೂ ಮೀರಿದ
14	ಸಿಆಸುಇ **26**ವಿಮಾಅ **2003**(ಬಾ–1)ದಿನಾಂಕ:09.09.2008	ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ	ರೂ. **10.00**ಲಕ್ಷಕ್ಕೂ ಮೀರಿದ
15	ಸಿಆಸುಇ **26**ವಿಮಾಅ **2003**(ಬಾ–1)ದಿನಾಂಕ:21.10.2008	ಖಜಾನೆ ನಿರ್ದೇಶನಾಲಯ (ಹಳೆಯ ಅಧಿಸೂಚನೆ ಸಂ: ಸಿಆಸುಇ 26 ವಿಮಾಅ 2003 (ಭಾ–1) ದಿನಾಂಕ: 16–10–2008)	ರೂ. **10.00**ಲಕ್ಷಕ್ಕೂ ಮೀರಿದ

16	ಸಿಆಸುಇ **26**ವಿಮಾಅ **2003**(ಬಾ–1)ದಿನಾಂಕ:12.11.2008	ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಇಲಾಖೆ (ಹಳೆಯ ಅಧಿಸೂಚನೆ ಸಂ: ಸಿಆಸುಇ 26 ವಿಮಾಆ 2003 (ಭಾ–1) ದಿನಾಂಕ 17/10/2008	ರೂ. **10.00**ಲಕ್ಷಕ್ಕೂ ಮೀರಿದ
17	ಸಿಆಸುಇ **26**ವಿಮಾಅ **2003**(ಬಾ–1)ದಿನಾಂಕ:12.11.2008	ಆಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)	ರೂ. **10.00**ಲಕ್ಷಕ್ಕೂ ಮೀರಿದ
18	ಸಿಆಸುಇ **20**ವಿಮಾಅ **2009** 1)ದಿನಾಂಕ:21.02.2009	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ	ರೂ. **10.00**ಲಕ್ಷಕ್ಕೂ ಮೀರಿದ
19	ಸಿಆಸುಇ **26**ವಿಮಾಅ **2003 (ಭಾ–**1)ದಿನಾಂಕ:27.02.2009	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ	ರೂ. **10.00**ಲಕ್ಷಕ್ಕೂ ಮೀರಿದ
20	ಸಿಆಸುಇ **20**ವಿಮಾಅ **2009 (1)** ದಿನಾಂಕ:13.07.2009	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಕೆಯುಡಬ್ಲ್ಯೂಎಸ್ ಡಿಬಿ) ಬೆಂಗಳೂರು	ರೂ. **10.00**ಲಕ್ಷಕ್ಕೂ ಮೀರಿದ
21	ಸಿಆಸುಇ **20**ವಿಮಾಅ **2009 (3)** ದಿನಾಂಕ:13.07.2009	ಅರಣ್ಯ ಇಲಾಖೆ	ರೂ. **10.00**ಲಕ್ಷಕ್ಕೂ ಮೀರಿದ

22	ಸಿಆಸುಇ **20**ವಿಮಾಅ **2009 (4)** ದಿನಾಂಕ:13.07.2009	ಬೆಳಗಾಂ ಮಹಾ ನಗರ ಪಾಲಿಕೆ	ರೂ. **10.00**ಲಕ್ಷಕ್ಕೂ ಮೀರಿದ
23	ಸಿಆಸುಇ **20**ವಿಮಾಅ **2009(4)** ದಿನಾಂಕ:13.07.2009	ಹುಬ್ಬಳ್ಳಿ-ಧಾರವಾಡ ಮಹಾ ನಗರ ಪಾಲಿಕೆ	ರೂ. **10.00**ಲಕ್ಷಕ್ಕೂ ಮೀರಿದ
24	ಸಿಆಸುಇ **20**ವಿಮಾಅ **2009(4)** ದಿನಾಂಕ:13.07.2009	ಗುಲ್ಬರ್ಗ ಮಹಾ ನಗರ ಪಾಲಿಕೆ	ರೂ. **10.00**ಲಕ್ಷಕ್ಕೂ ಮೀರಿದ
25	ಸಿಆಸುಇ **20**ವಿಮಾಅ **2009(4)** ದಿನಾಂಕ:13.07.2009	ಬಳ್ಳಾರಿ ಮಹಾ ನಗರ ಪಾಲಿಕೆ	ರೂ. **10.00**ಲಕ್ಷಕ್ಕೂ ಮೀರಿದ
26	ಸಿಆಸುಇ **20**ವಿಮಾಅ **2009(4)** ದಿನಾಂಕ:13.07.2009	ಮಂಗಳೂರು ಮಹಾ ನಗರ ಪಾಲಿಕೆ	ರೂ. **10.00**ಲಕ್ಷಕ್ಕೂ ಮೀರಿದ
27	ಸಿಆಸುಇ **20**ವಿಮಾಅ **2009(4)** ದಿನಾಂಕ:13.07.2009	ದಾವಣಗೆರೆ ಮಹಾ ನಗರ ಪಾಲಿಕೆ	ರೂ. **10.00**ಲಕ್ಷಕ್ಕೂ ಮೀರಿದ
28	ಸಿಆಸುಇ **20**ವಿಮಾಅ **2009(2)** ದಿನಾಂಕ:13.07.2009	ಎಸ್.ಡಿ.ಎಸ್.ಟಿ.ಬಿ ಮತ್ತು ರಾಜೀವ್ ಗಾಂಧಿ ಇನ್ಸಿಟಿಟ್ಯೂಟ್ ಆಫ್ ಚೆಸ್ಟ್ ಡಿಸೀಸಸ್, ಬೆಂಗಳುರು	ರೂ. **10.00**ಲಕ್ಷಕ್ಕೂ ಮೀರಿದ
29	ಸಿಆಸುಇ **20**ವಿಮಾಅ **2009** ದಿನಾಂಕ:13.08.2009	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಕಾರ್ಯಕಾರಿ ವಿಭಾಗ)	ರೂ. **10.00**ಲಕ್ಷಕ್ಕೂ ಮೀರಿದ

30	ಸಿಆಸುಇ **20**ವಿಮಾಅ **2009** ದಿನಾಂಕ:13.08.2009	ತುಮಕೂರು ವಿಶ್ವವಿದ್ಯಾಲಯ	ರೂ. **10.00**ಲಕ್ಷಕ್ಕೂ ಮೀರಿದ
31	ಸಿಆಸುಇ **20**ವಿಮಾಅ **2009** ದಿನಾಂಕ:02.09.2009	ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಬೆಂಗಳೂರು (ಬಿಎಮ್‌ಟಿಸಿ) (ಹಳೆಯ ಅಧಿಸೂಚನೆ ಸಂ: ಸಿಆಸುಇ 20 ವಿಮಾಆ 2009 ದಿನಾಂ: 01.09.2009	ರೂ. **10.00**ಲಕ್ಷಕ್ಕೂ ಮೀರಿದ
32	ಸಿಆಸುಇ **20**ವಿಮಾಅ **2009(1)** ದಿನಾಂಕ:16.09.2009	ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನಗಳ ಸಂಸ್ಥೆ, ಬೆಂಗಳೂರು (ಹಳೆಯ ಅಧಿಸೂಚನೆ ಸಂ: ಸಿಆಸುಇ 20 ವಿಮಾಆ 2009 ದಿನಾಂಕ: 13.08.2009)	ರೂ. **10.00**ಲಕ್ಷ
33	ಸಿಆಸುಇ **20**ವಿಮಾಅ **2009(2)** ದಿನಾಂಕ:16.09.2009	ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹುಬ್ಬಳ್ಳಿ	ರೂ. **10.00**ಲಕ್ಷಕ್ಕೂ ಮೀರಿದ
34	ಸಿಆಸುಇ **20**ವಿಮಾಅ **2009** ದಿನಾಂಕ:22.10.2009	ವಿತ್ತೀಯ ನೀತಿ ವಿಶ್ಲೇಷಣಾ ಕೋಶ(ಎಫ್ ಪಿಎಸಿ),ಆರ್ಥಿಕ	ಎಲ್ಲಾ ಸಂಗ್ರಹಣೆಗಳು

		ಇಲಾಖೆ	
35	ಸಿಆಸುಇ **20**ವಿಮಾಅ **2009** ದಿನಾಂಕ:28.10.2009	ಡಿ.ದೇವರಾಜ್ ಅರಸ್ ಟ್ರ್ಯಾಕ್ ಟರ್ಮಿನಲ್ಸ್ ಲಿ.,	ಎಲ್ಲಾ ಸಂಗ್ರಹಣೆಗಳು
36	ಸಿಆಸುಇ **20**ವಿಮಾಅ **2009(1)** ದಿನಾಂಕ:07.11.2009	ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಇಲಾಖೆ	ರೂ. **10.00**ಲಕ್ಷಕ್ಕೂ ಮೀರಿದ
37	ಸಿಆಸುಇ **20**ವಿಮಾಅ **2009(1)** ದಿನಾಂಕ:07.11.2009	ಮೀನುಗಾರಿಕೆ ಇಲಾಖೆ	ರೂ. **5.00**ಲಕ್ಷಕ್ಕೂ ಮೀರಿದ
38	ಸಿಆಸುಇ **20**ವಿಮಾಅ **2009(2)** ದಿನಾಂಕ:07.11.2009	ಕರ್ನಾಟಕ ಅರಣ್ಯಾಭಿವೃದ್ಧಿ ನಿಗಮ ನಿಯಮಿತ	ರೂ. **10.00**ಲಕ್ಷಕ್ಕೂ ಮೀರಿದ
39	ಸಿಆಸುಇ **20**ವಿಮಾಅ **2009** ದಿನಾಂಕ:24.11.2009	ಡಾ// ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ	ಎಲ್ಲಾ ಸಂಗ್ರಹಣೆಗಳು
40	ಸಿಆಸುಇ 3 ಇಸಂಗ್ರ **2009(2)** ದಿನಾಂಕ:26.12.2009	ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ	ಎಲ್ಲಾ ಸಂಗ್ರಹಣೆಗಳು
41	ಸಿಆಸುಇ 3 ಇಸಂಗ್ರ **2009(1)** ದಿನಾಂಕ:02.02.2009	ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು	ಎಲ್ಲಾ ಸಂಗ್ರಹಣೆಗಳು
42	ಸಿಆಸುಇ 3 ಇಸಂಗ್ರ **2009(1)** ದಿನಾಂಕ:04.02.2010	ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು	ಎಲ್ಲಾ ಸಂಗ್ರಹಣೆಗಳು

43	ಸಿಆಸುಇ 3 ಇಸಂಗ್ರ **2009(3)** ದಿನಾಂಕ:04.02.2010	ವಾರ್ತಾ ಇಲಾಖೆ, ಬೆಂಗಳೂರು	ಎಲ್ಲಾ ಸಂಗ್ರಹಣೆಗಳು
44	ಸಿಆಸುಇ 3 ಇಸಂಗ್ರ **2009(1)** ದಿನಾಂಕ:15.02.2010	ಡಿ. ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಮಿತ, ಬೆಂಗಳೂರು	ಎಲ್ಲಾ ಸಂಗ್ರಹಣೆಗಳು
45	ಸಿಆಸುಇ 3 ಇಸಂಗ್ರ **2009** ದಿನಾಂಕ:20.03.2010	ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಹಳೆಯ ಅಧಿಸೂಚನೆ ಸಂ: ಸಿಆಸುಇ 03 ಇಸಂಗ್ರ 2009 (2) ದಿನಾಂಕ:22.02.2010)	ರೂ. **20.00**ಲಕ್ಷಕ್ಕೂ ಮೀರಿದ
46	ಸಿಆಸುಇ 3 ಇಸಂಗ್ರ **2009** ದಿನಾಂಕ:22.03.2010	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಬೆಂಗಳೂರು (ಹಳೆಯ ಅಧಿಸೂನೆ ಸಂ: ಸಿಆಸುಇ 26 ವಿಮಾಆ 2003 (ಭಾ–1) ದಿನಾಂಕ: 22.08.2008	ರೂ. **5.00**ಲಕ್ಷಕ್ಕೂ ಮೀರಿದ
47	ಸಿಆಸುಇ 3 ಇಸಂಗ್ರ **2009** ದಿನಾಂಕ:22.03.2010	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ	ರೂ. **5.00**ಲಕ್ಷಕ್ಕೂ ಮೀರಿದ

		ಮೈಸೂರು	
48	ಸಿಆಸುಇ 3 ಇಸಂಗ್ರ **2009** ದಿನಾಂಕ:22.03.2010	ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಗುಲ್ಬರ್ಗ	ರೂ. **5.00**ಲಕ್ಷಕ್ಕೂ ಮೀರಿದ
49	ಸಿಆಸುಇ 3 ಇಸಂಗ್ರ **2009** ದಿನಾಂಕ:22.03.2010	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ	ರೂ. **5.00**ಲಕ್ಷಕ್ಕೂ ಮೀರಿದ
50	ಸಿಆಸುಇ 3 ಇಸಂಗ್ರ **2009** ದಿನಾಂಕ:22.03.2010	ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಮಂಗಳೂರು	ರೂ. **5.00**ಲಕ್ಷಕ್ಕೂ ಮೀರಿದ
51	ಸಿಆಸುಇ 2 ಇಸಂಗ್ರ **2010** ದಿನಾಂಕ:28.04.2010	ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ, ಬೆಂಗಳೂರು	ಎಲ್ಲಾ ಸಂಗ್ರಹಣೆಗಳು
52	ಸಿಆಸುಇ 2 ಇಸಂಗ್ರ **2010** ದಿನಾಂಕ:08.06.2010	ಜಲಸಂಪನ್ಮೂಲ ಇಲಾಖೆಯ ಎಲ್ಲಾ ಅಧೀನ ಕಛೇರಿಗಳು ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ (ಹಳೆಯ ಅಧಿಸೂಚನೆ ಸಂ: ಸಿಆಸುಇ 26 ವಿಮಾಆ 2003 (ಭಾ–1) ದಿನಾಂಕ: 26.12.2007	ಎಲ್ಲಾ ಸಂಗ್ರಹಣೆಗಳು
53	ಸಿಆಸುಇ 2 ಇಸಂಗ್ರ **2010** ದಿನಾಂಕ:08.06.2010	ಕರ್ನಾಟಕ ನೀರಾವರಿ ನಿಗಮ ನಿಯಮಿತ	ಎಲ್ಲಾ ಸಂಗ್ರಹಣೆಗಳು

54	ಸಿಆಸುಇ 2 ಇಸಂಗ್ರ **2010** ದಿನಾಂಕ:10.06.2010	ತುಮಕೂರು ಜಿಲ್ಲಾ ಪಂಚಾಯತ್, ತುಮಕೂರು	ರೂ. **1.00**ಲಕ್ಷಕ್ಕೂ ಮೀರಿದ
55	ಸಿಆಸುಇ 2 ಇಸಂಗ್ರ **2010(1)** ದಿನಾಂಕ:01.06.2010	ಪೊಲೀಸ್ ಇಲಾಖೆ (ಹಳೆಯ ಅಧಿಸೂಚನೆ ಸಂಖ್ಯೆ: ಸಿಆಸುಇ 20 ವಿಮಾಆ 2009 ದಿನಾಂಕ: 13.08.2009)	ರೂ. **1.00**ಲಕ್ಷಕ್ಕೂ ಮೀರಿದ
56	ಸಿಆಸುಇ 2 ಇಸಂಗ್ರ **2010(1)** ದಿನಾಂಕ:24.06.2010	ಕರ್ನಾಟಕ ರೂರಲ್ ಇನ್ ಫ್ರಾಸ್ಟ್ರಕ್ಚರ್ ಡೆವಲಪ್ ಮೆಂಟ್ ಲಿಮಿಟೆಡ್ (ಹಳೆಯ ಅಧಿಸೂಚನೆ ಸಂಖ್ಯೆ: ಸಿಆಸಇ 26 ವಿಮಾಆ 2003 (ಭಾ–1 ದಿನಾಂಕ: 09.09.2008)	ರೂ. **1.00**ಲಕ್ಷಕ್ಕೂ ಮೀರಿದ
57	ಸಿಆಸುಇ 2 ಇಸಂಗ್ರ **2010(3)** ದಿನಾಂಕ:24.06.2010	ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು	ಎಲ್ಲಾ ಸಂಗ್ರಹಣೆಗಳು
58	ಸಿಆಸುಇ 2 ಇಸಂಗ್ರ **2010(4)** ದಿನಾಂಕ:19.07.2010	ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ	ಎಲ್ಲಾ ಸಂಗ್ರಹಣೆಗಳು
59	ಸಿಆಸುಇ 2 ಇಸಂಗ್ರ **2010(3)** ದಿನಾಂಕ:19.07.2010	ಮೈಸೂರು ಕಾಗದ ಕಾರ್ಖಾನೆ, ಭದ್ರಾವತಿ	ಎಲ್ಲಾ ಸಂಗ್ರಹಣೆಗಳು

60	ಸಿಆಸುಇ 2 ಇಸಂಗ್ರ **2010(2)** ದಿನಾಂಕ:19.07.2010	ರಾಜ್ಯ ಸಾಕ್ಷರತಾ ಮಿಷನ್ ಪ್ರಾಧಿಕಾರ, ಬೆಂಗಳೂರು	ಎಲ್ಲಾ ಸಂಗ್ರಹಣೆಗಳು
61	ಸಿಆಸುಇ 2 ಇಸಂಗ್ರ **2010(2)** ದಿನಾಂಕ:19.07.2010	ಲೋಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು	ಎಲ್ಲಾ ಸಂಗ್ರಹಣೆಗಳು
62	ಸಿಆಸುಇ 2 ಇಸಂಗ್ರ **2010(1)** ದಿನಾಂಕ:19.07.2010	ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್, ಬೆಂಗಳೂರು	ಎಲ್ಲಾ ಸಂಗ್ರಹಣೆಗಳು
63	ಸಿಆಸುಇ 3 ಇಸಂಗ್ರ **2010(1)** ದಿನಾಂಕ:28.08.2010	ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ಬಾಗಲಕೋಟ (ಹಳೆಯ ಅಧಿಸೂಚನೆ ಸಂ: ಸಿಆಸುಇ 2 ಇಸಂಗ್ರ 2010(1) ದಿನಾಂಕ: 24.08.2010	ಎಲ್ಲಾ ಸಂಗ್ರಹಣೆಗಳು
64	ಸಿಆಸುಇ 2 ಇಸಂಗ್ರ **2010(2)** ದಿನಾಂಕ:28.08.2010	ಮುದ್ರಣ, ಲೇಖನಾ ಸಾಮಾಗ್ರಿ ಮತ್ತು ಪ್ರಕಟಣೆಗಳ ನಿರ್ದೇಶನಾಲಯ, ಬೆಂಗಳೂರು (ಹಳೆಯ ಅಧಿಸೂಚನೆ ಸಂ: ಸಿಆಸುಇ 2 ಇಸಂಗ್ರ 2010 (2) ದಿನಾಂಕ: 24.08.2010	ಎಲ್ಲಾ ಸಂಗ್ರಹಣೆಗಳು

65	ಸಿಆಸುಇ 2 ಇಸಂಗ್ರ **2010(3)** ದಿನಾಂಕ:28.08.2010	ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು (ಹಳೆಯ ಅಧಿಸೂಚನೆ ಸಂ: ಸಿಆಸುಇ 2 ಇಸಂಗ್ರ 2010(3) ದಿನಾಂಕ: (24.08.2010)	ಎಲ್ಲಾ ಸಂಗ್ರಹಣೆಗಳು
66	ಸಿಆಸುಇ 3 ಇಸಂಗ್ರ **2010(1)** ದಿನಾಂಕ:27.09.2010	ಕರ್ನಾಟಕ ವಿದ್ಯುತ್ ನಿಮಗ ನಿಯಮಿತ (ಹಳೆಯ ಅಧಿಸೂಚನೆ ಸಂ: ಸಿಆಸುಇ 20 ವಿಮಾಆ 2009(1) ದಿನಾಂಕ: 21.11.2009)	ರೂ. **10.00**ಲಕ್ಷಕ್ಕೂ ಮೀರಿದ
67	ಸಿಆಸುಇ 3 ಇಸಂಗ್ರ **2010** ದಿನಾಂಕ:21.10.2010	ಮೈಸೂರು ನಗರ ಪಾಲಿಕೆ (ಹಳೆಯ ಅಧಿಸೂಚನೆ ಸಂಖ್ಯೆ: ಸಿಆಸುಇ 21 ವಿಮಾಆ 2009 ದಿನಾಂಕ: 24.02.2009 ಮತ್ತು ಅಧಿಸೂಚನೆ ಸಂಖ್ಯೆ: ಸಿಆಸುಇ 20 ವಿಮಾಆ 2009(4) ದಿನಾಂಕ:13.07.2009)	ರೂ. **1.00**ಲಕ್ಷಕ್ಕೂ ಮೀರಿದ

68	ಸಿಆಸುಇ 3 ಇಸಂಗ್ರ **2010** ದಿನಾಂಕ:28.10.2010	ಉಡುಪಿ ನಗರ ಸಭೆ, ಉಡುಪಿ	ರೂ. **5.00**ಲಕ್ಷಕ್ಕೂ ಮೀರಿದ
69	ಸಿಆಸುಇ 3 ಇಸಂಗ್ರ **2010(1)** ದಿನಾಂಕ:06.12.2010	ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಹಳೆಯ ಅಧಿಸೂಚನೆ ಸಂಖ್ಯೆ: ಸಿಆಸುಇ 26 ವಿಮಾಆ 2003 (ಭಾ–1) ದಿನಾಂಕ: 26.12.2007)	ರೂ. **10.00**ಲಕ್ಷಕ್ಕೂ ಮೀರಿದ
70	ಸಿಆಸುಇ 3 ಇಸಂಗ್ರ **2010(2)** ದಿನಾಂಕ:06.12.2010	ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು	ಎಲ್ಲಾ ಸಂಗ್ರಹಣೆಗಳು
71	ಸಿಆಸುಇ 3 ಇಸಂಗ್ರ **2010** ದಿನಾಂಕ:09.12.2010	ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳು, ಬೆಳಗಾವಿ	ಎಲ್ಲಾ ಸಂಗ್ರಹಣೆಗಳು
72	ಸಿಆಸುಇ 3 ಇಸಂಗ್ರ **2010** ದಿನಾಂಕ:01.01.2011	ಕನ್ನಡ ವಿಶ್ವವಿದ್ಯಾನಿಲಯ, ಹಂಪಿ	ರೂ. **5.00**ಲಕ್ಷಕ್ಕೂ ಮೀರಿದ
73	ಸಿಆಸುಇ 3 ಇಸಂಗ್ರ **2010(3)** ದಿನಾಂಕ:14.01.2011	ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ	ಎಲ್ಲಾ ಸಂಗ್ರಹಣೆಗಳು

74	ಸಿಆಸುಇ 3 ಇಸಂಗ್ರ **2010(2)** ದಿನಾಂಕ:14.01.2011	ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಾಪುರ	ಎಲ್ಲಾ ಸಂಗ್ರಹಣೆಗಳು
75	ಸಿಆಸುಇ 3 ಇಸಂಗ್ರ **2010(1)** ದಿನಾಂಕ:14.01.2011	ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ, ಮೈಸೂರು	ಎಲ್ಲಾ ಸಂಗ್ರಹಣೆಗಳು
76	ಸಿಆಸುಇ 3 ಇಸಂಗ್ರ **2010(1)** ದಿನಾಂಕ:01.02.2011	ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳಿ ನಿಯಮಿತ, ಬೆಂಗಳೂರು	ಎಲ್ಲಾ ಸಂಗ್ರಹಣೆಗಳು
77	ಸಿಆಸುಇ 3 ಇಸಂಗ್ರ **2010(2)** ದಿನಾಂಕ:01.02.2011	ತೋಟಗಾರಿಕೆ ನಿರ್ದೇಶನಾಲಯ, ಬೆಂಗಳೂರು	ಎಲ್ಲಾ ಸಂಗ್ರಹಣೆಗಳು
78	ಸಿಆಸುಇ 3 ಇಸಂಗ್ರ **2010(1)** ದಿನಾಂಕ:16.03.2011	ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು	ಎಲ್ಲಾ ಸಂಗ್ರಹಣೆಗಳು
79	ಸಿಆಸುಇ 3 ಇಸಂಗ್ರ **2010(4)** ದಿನಾಂಕ:16.03.2011	ಕಾವೇರಿ ನೀರಾವರಿ ನಿಗಮ (ಹಳೆಯ ಅಧಿಸೂಚನೆ ಸಂಖ್ಯೆ: ಸಿಆಸುಇ 3 ಇಸಂಗ್ರ 2009(1) ದಿನಾಂಕ: 26.12.2009)	ರೂ. **5.00**ಲಕ್ಷಕ್ಕೂ ಮೀರಿದ
80	ಸಿಆಸುಇ 3 ಇಸಂಗ್ರ **2010(5)** ದಿನಾಂಕ:16.03.2011	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಮ್‌ಪಿ) (ಹಳೆಯ ಅಧಿಸೂಚನೆ ಸಂಖ್ಯೆ:	ರೂ. **20.00**ಲಕ್ಷಕ್ಕೂ ಮೀರಿದ

		ಸಿಆಸುಇ 20 ವಿಮಾಆ 2009 ದಿನಾಂಕ: 13.08.2009)	
81	ಸಿಆಸುಇ 3 ಇಸಂಗ್ರ **2010(2)** ದಿನಾಂಕ:16.03.2011	ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ, ಮೈಸೂರು	ಎಲ್ಲಾ ಸಂಗ್ರಹಣೆಗಳು
82	ಸಿಆಸುಇ 3 ಇಸಂಗ್ರ **2010(3)** ದಿನಾಂಕ:16.03.2011	ಶ್ರೀ ಕಠೀರವ ಸ್ಟುಡಿಯೋ ನಿಯಮಿತ, ಬೆಂಗಳೂರು	ಎಲ್ಲಾ ಸಂಗ್ರಹಣೆಗಳು
83	ಸಿಆಸುಇ 3 ಇಸಂಗ್ರ **2010(1)** ದಿನಾಂಕ:31.03.2011	ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆ (ಹಳೆಯ ಅಧಿಸೂಚನೆ ಸಂ:ಸಿಆಸುಇ 26 ವಿಮಾಆ 2003 (ಭಾ–1) ದಿನಾಂಕ: 05.02.2009)	ರೂ. **5.00**ಲಕ್ಷಕ್ಕೂ ಮೀರಿದ
84	ಸಿಆಸುಇ 4 ಇಸಂಗ್ರ **2011(1)** ದಿನಾಂಕ:02.05.2011	44 ನಗರ ಸಭೆಗಳು (ದೊಡ್ಡಬಳ್ಳಾಪುರ, ರಾಮನಗರ, ಚೆನ್ನಪಟ್ಟಣ, ಚಿತ್ರದುರ್ಗ, ಹರಿಹರ, ಕೋಲಾರ, ರಾಬರ್ಟ್ಸನ್ ಪೇಟ್, ಚಿಕ್ಕಬಳ್ಳಾಪುರ, ಚಿಂತಾಮಣಿ,	ರೂ. **5.00**ಲಕ್ಷಕ್ಕೂ ಮೀರಿದ

		ಶಿವಮೊಗ್ಗ, ಭದ್ರವಾತಿ, ಸಾಗರ, ಸಿರಾ, ತಿಪಟೂರು, ತುಮಕೂರು, ಚಾಮರಾಜನಗರ, ಕೊಳ್ಳೆಗಾಲ, ಚಿಕ್ಕಮಗಳೂರು, ಹಾಸನ, ಮಡಿಕೇರಿ, ಮಂಡ್ಯ, ಉಡುಪಿ, ಬಾಗಲಕೋಟೆ, ಇಳ್ಕಲ್, ಜಮಖಂಡಿ, ರಬಕವಿ ಬನಹಟ್ಟಿ, ಗೋಕಾಕ್, ನಿಪ್ಪಾಣಿ, ಬಿಜಾಪುರ, ಗದಗ-ಬೆಟ್ಟಗೇರಿ, ಹಾವೇರಿ, ರಾಣೆಬೆನ್ನೂರು, ದಾಂಡೇಲಿ, ಕಾರವಾರ, ಸಿರ್ಸಿ, ಹೊಸಪೇಟೆ, ಬಸವಕಲ್ಯಾಣ, ಬೀದರ್, ಶಹಾಬಾದ್, ಯಾದಗಿರಿ, ಗಂಗಾವತಿ, ಕೊಪ್ಪಳ, ರಾಯಚೂರು, ಸಿಂಧನೂರು)	
85	ಸಿಆಸುಇ 2 ಇಸಂಗ್ರ **2011** ದಿನಾಂಕ:16.05.2011	ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು	ಎಲ್ಲಾ ಸಂಗ್ರಹಣೆಗಳು

86	ಸಿಆಸುಇ 2 ಇಸಂಗ್ರ **2011(1)** ದಿನಾಂಕ:21.06.2011	ಸರ್ಕಾರಿ ದಂತ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು	ಎಲ್ಲಾ ಸಂಗ್ರಹಣೆಗಳು
87	ಸಿಆಸುಇ 2 ಇಸಂಗ್ರ **2011(2)** ದಿನಾಂಕ:21.06.2011	ಮೈಸೂರು ನಿರ್ಮಿತಿ ಕೇಂದ್ರ (ನೊಂ) ಮೈಸೂರು	ರೂ. **10.00**ಲಕ್ಷಕ್ಕೂ ಮೀರಿದ
88	ಸಿಆಸುಇ 2 ಇಸಂಗ್ರ **2011** ದಿನಾಂಕ:11.07.2011	ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು	ರೂ. **1.00**ಲಕ್ಷಕ್ಕೂ ಮೀರಿದ
89	ಸಿಆಸುಇ 2 ಇಸಂಗ್ರ **2011(1)** ದಿನಾಂಕ:29.07.2011	ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು	ಎಲ್ಲಾ ಸಂಗ್ರಹಣೆಗಳು
90	ಸಿಆಸುಇ 2 ಇಸಂಗ್ರ **2011(3)** ದಿನಾಂಕ:29.07.2011	ದಿ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್	ರೂ. **1.00**ಲಕ್ಷಕ್ಕೂ ಮೀರಿದ
91	ಸಿಆಸುಇ 2 ಇಸಂಗ್ರ **2011(4)** ದಿನಾಂಕ:29.07.2011	ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು	ಎಲ್ಲಾ ಸಂಗ್ರಹಣೆಗಳು
92	ಸಿಆಸುಇ 2 ಇಸಂಗ್ರ **2011(2)** ದಿನಾಂಕ:29.07.2011	ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು (ಹಳೆಯ ಅಧಿಸೂಚನೆ ಸಂ: ಸಿಆಸುಇ 20 ವಿಮಾಅ 2009 ದಿನಾಂಕ:7.09.2009)	ರೂ. **20.00**ಲಕ್ಷಕ್ಕೂ ಮೀರಿದ

93	ಸಿಆಸುಇ 2 ಇಸಂಗ್ರ **2011** ದಿನಾಂಕ:22.08.2011	ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು	ಎಲ್ಲಾ ಸಂಗ್ರಹಣೆಗಳು
94	ಸಿಆಸುಇ 2 ಇಸಂಗ್ರ **2011(2)** ದಿನಾಂಕ:09.09.2011	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು	ರೂ. 1.00ಲಕ್ಷಕ್ಕೂ ಮೀರಿದ
95	ಸಿಆಸುಇ 2 ಇಸಂಗ್ರ **2011(1)** ದಿನಾಂಕ:09.09.2011	ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಬೆಂಗಳೂರು	ಎಲ್ಲಾ ಸಂಗ್ರಹಣೆಗಳು
96	ಸಿಆಸುಇ 2 ಇಸಂಗ್ರ **2011(1)** ದಿನಾಂಕ:21.10.2011	ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು	ರೂ. 1.00ಲಕ್ಷಕ್ಕೂ ಮೀರಿದ
97	ಸಿಆಸುಇ 2 ಇಸಂಗ್ರ **2011(2)** ದಿನಾಂಕ:21.10.2011	ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆ ನಿಗಮ ನಿಯಮಿತ, ಬೆಂಗಳೂರು	ರೂ. 1.00ಲಕ್ಷಕ್ಕೂ ಮೀರಿದ
98	ಸಿಆಸುಇ 2 ಇಸಂಗ್ರ **2011** ದಿನಾಂಕ:21.11.2011	ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಯಲಯ, ಬೆಂಗಳೂರು	ರೂ. 1.00ಲಕ್ಷಕ್ಕೂ ಮೀರಿದ
99	ಸಿಆಸುಇ 1 ಇಸಂಗ್ರ **2012** ದಿನಾಂಕ:25.01.2012	ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬೆಂಗಳೂರು	ರೂ. 1.00ಲಕ್ಷಕ್ಕೂ ಮೀರಿದ
100	ಸಿಆಸುಇ 1 ಇಸಂಗ್ರ **2012(1)**	ಕರ್ನಾಟಕ ರೇಷ್ಮೆ ಉದ್ಯಮಿಗಳ ನಿಗಮ	ರೂ. 1.00ಲಕ್ಷಕ್ಕೂ

	ದಿನಾಂಕ:19.04.2012	ನಿಯಮಿತ, ಬೆಂಗಳೂರು	ಮೀರಿದ
101	ಸಿಆಸುಇ 1 ಇಸಂಗ್ರ **2012(2)** ದಿನಾಂಕ:19.04.2012	ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಬೆಂಗಳೂರು	ರೂ. **1.00**ಲಕ್ಷಕ್ಕೂ ಮೀರಿದ
102	ಸಿಆಸುಇ 1 ಇಸಂಗ್ರ **2012(3)** ದಿನಾಂಕ:19.04.2012	ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು	ರೂ. **5.00**ಲಕ್ಷಕ್ಕೂ ಮೀರಿದ
103	ಸಿಆಸುಇ 6 ಇಸಂಗ್ರ **2012(2)** ದಿನಾಂಕ:08.06.2012	ರೇಷ್ಮೆ ಇಲಾಖೆ, ಬೆಂಗಳೂರು	ರೂ. **1.00**ಲಕ್ಷಕ್ಕೂ ಮೀರಿದ
104	ಸಿಆಸುಇ 6 ಇಸಂಗ್ರ **2012(1)** ದಿನಾಂಕ:08.06.2012	ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತ, ಬೆಂಗಳೂರು	ರೂ. **1.00**ಲಕ್ಷಕ್ಕೂ ಮೀರಿದ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ–IV-A	ಬೆಂಗಳೂರು, ಗುರುವಾರ, ಜುಲೈ 12/ 2012 (ಅಷಾಢ 21, ಶಕ ವರ್ಷ 1934)	ನಂ.475

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 55 ಸೇಅನೇ 2012, ಬೆಂಗಳೂರು, ದಿನಾಂಕ: 11.07.2012

ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996, ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ದಿನಾಂಕ: 20.06.2012ರ ಅಧಿಸೂಚನೆ ಸಂಖ್ಯೆ: ಸಿಆಸುಇ 55 ಸೇಅನೇ 2012 ರಲ್ಲಿ ಪ್ರಕಟಿಸಿರುವ ಈ ಮುಂದಿನ ನಿಯಮಗಳ ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಇದರ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 21.06.2012ರ ಕರ್ನಾಟಕ ರಾಜ್ಯಪತ್ರದ ಭಾಗ–iv ಎ (ಸಂ: 413) ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14)ರ 3ನೇ ಪ್ರಕರಣದ (2) ನೇ ಉಪಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ;

ಸದರಿ ರಾಜ್ಯಪತ್ರವನ್ನು 21.06.2012ರಂದು ಸಾರ್ವಜನಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು, ಸದರಿ ಕರಡಿನ ಬಗ್ಗೆ ಯವುದೇ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗದಿರುವುದರಿಂದ;

ಈಗ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990 ಕರ್ನಾಟಕ ಅಧಿನಿಯಮ, 14)ರ 8ನೇ ಪ್ರಕರಣದೊಂದಿಗೆ ಓದಿಕೊಂಡ 3ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

ನಿಯಮಗಳು

1. **ಶೀರ್ಷಿಗೆ ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) (ಏಳನೇ ತಿದ್ದುಪಡಿ) ನಿಯಮಗಳು, 2012 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ನಿಯಮ 2ಕ್ಕೆ ತಿದ್ದುಪಡಿ:- ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996 (ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗುವುದು)ರ ನಿಯಮ 2ರ ಉಪನಿಯಮ (1)ರ

(i) ಖಂಡ (ಎ)ರಲ್ಲಿ ಅಂಶ (ii) ರ ನಂತರ ಕೆಳಕಂಡವುಗಳನ್ನು ಸೇರಿಸತಕ್ಕದ್ದು. ಅಂದರೆ:-

(iii) ಅವಿವಾಹಿತ ಪುರುಷ ಮೃತ ಸರ್ಕಾರಿ ನೌಕರನ ಪ್ರಕರಣಕ್ಕೆ ಸಂಬಂಧಿಸಿದಂತೆ, ಆತನ ಮೇಲೆ ಅವಲಂಬಿತರಾಗಿದ್ದ ಹಾಗೂ ಆತನೊಂದಿಗೆ ವಾಸಿಸುತ್ತಿದ್ದ ಆತನ ಅವಿವಾಹಿತ ಸಹೋದರ, ಅವಿವಾಹಿತ ಅಥವಾ ವಿಧವಾ ಸಹೋದರಿ, ಮತ್ತು

(iv)ಅವಿವಾಹಿತ ಮೃತ ಮಹಿಳಾ ಸರ್ಕಾರಿ ನೌಕರಳ ಪ್ರಕರಣಕ್ಕೆ ಸಂಬಂಧಿಸಿದಂತೆ, ಆಕೆಯ ಮೇಲೆ ಅವಲಂಬಿತರಾಗಿದ್ದ ಹಾಗೂ

ಆಕೆಯೊಂದಿಗೆ ವಾಸಿಸುತ್ತಿದ್ದ ಆಕೆಯ ಅವಿವಾಹಿತ ಸಹೋದರ, ಅವಿವಾಹಿತ ಅಥವಾ ವಿಧವಾ ಸಹೋದರಿ"

(ii) ಖಂಡ (ಬಿ) ರಲ್ಲಿ "ವಿಧವಾ ಮಗಳು" ಪದಗಳ ನಂತರ "ಅವಿವಾಹಿತ ಸಹೋದರ, ಅವಿವಾಹಿತ ಅಥವಾ ವಿಧವಾ ಸಹೋದರಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

3. ನಿಯಮ 3ಕ್ಕೆ ತಿದ್ದುಪಡಿ:– ನಿಯಮ 3ರ ಉಪನಿಯಮ (2)ರಲ್ಲಿ ಖಂಡ (i)ರ ನಂತರ ಈ ಕೆಳಕಂಡವುಗಳನ್ನು ಸೇರಿಸತಕ್ಕದ್ದು, ಅಂದರೆ:–

(iಎ) ಅವಿವಾಹಿತ ಮೃತ ಪುರುಷ ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ:– ಆತನ ಮೇಲೆ ಅವಲಂಬಿತರಾಗಿದ್ದ ಹಾಗೂ ಆತನೊಂದಿಗೆ ವಾಸಿಸುತ್ತಿದ್ದ ಆತನ

(ಎ) ಅವಿವಾಹಿತ ಸಹೋದರ

(ಬಿ) ಅವಿವಾಹಿತ ಅಥವಾ ವಿಧವಾ ಸಹೋದರಿ

(ii) ಖಂಡ (ii) ರ ನಂತರ ಈ ಕೆಳಕಂಡವುಗಳನ್ನು ಸೇರಿಸತಕ್ಕದ್ದು, ಅಂದರೆ:–

ಆಕೆಯ ಮೇಲೆ ಅವಲಂಬಿತರಾಗಿದ್ದ ಹಾಗೂ ಆಕೆಯೊಂದಿಗೆ ವಾಸಿಸುತ್ತಿದ್ದ ಆಕೆಯ

(ಎ)ಅವಿವಾಹಿತ ಸಹೋದರ

(ಬಿ) ಅವಿವಾಹಿತ ಅಥವಾ ವಿಧವಾ ಸಹೋದರಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಡಾ. ಮಂಗಳ ಜಿ.ಎಸ್.

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,

(ಸೇವಾ ನಿಯಮಗಳು–1)

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ–IV-A	ಬೆಂಗಳೂರು, ಶುಕ್ರವಾರ, ಅಕ್ಟೋಬರ್ 14,. 2011 (ಆಶ್ವಯುಜ 22 ಶಕ ವರ್ಷ 1933)	ನಂ.873

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

78ಸಂಖ್ಯೆ ಸಿಅಸುಇ ಸೇಅನೇ 2011, ಬೆಂಗಳೂರು, ದಿನಾಂಕ: 13.10.2011

ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996, ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ದಿನಾಂಕ: 06.09.2011 ರ ಅಧಿಸೂಚನೆ ಸಂಖ್ಯೆ: ಸಿಆಸುಇ 78 ಸೇಅನೇ 2011 ರಲ್ಲಿ ಪ್ರಕಟಿಸಿರುವ ಈ ಮುಂದಿನ ನಿಯಮಗಳ ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಇದರ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 08.09.2011ರ ಕರ್ನಾಟಕ ರಾಜ್ಯಪತ್ರದ ಭಾಗ–ivಎ (ಪಿ.ಆರ್. ಸಂ: 808) ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14)ರ 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ;

ಸದರಿ ರಾಜ್ಯಪತ್ರವನ್ನು ದಿನಾಂಕ: 08.09.2011 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ; ಮತ್ತು ಸದರಿ

ಸದರಿ ಕರಡಿನ ಬಗ್ಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗದಿರುವುದರಿಂದ;

ಈಗ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ, 14)ರ 8ನೇ ಪ್ರಕರಣದೊಂದಿಗೆ ಓದಿಕೊಂಡ 3ನೇ ಪ್ರಕರಣದ (1) ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:–

ನಿಯಮಗಳು

1. **ಶಿರೋನಾಮೆ ಮತ್ತು ಪ್ರಾರಂಭ:–** (1) ಈ ನಿಯಮಗಳನ್ನು ಕರ್ನಾಟಕ ಸಿವಿಎಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) (ಆರನೇ ತಿದ್ದುಪಡಿ) ನಿಯಮಗಳು 2011 ಎಂದು ಕರೆಯತಕ್ಕದ್ದು.
2. ಇವು, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2 ನಿಯಮ 1ಕ್ಕೆ ತಿದ್ದುಪಡಿ:– ಕರ್ನಾಟಕ ಸಿವಿಎಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996 (ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗುವುದು) ರ ನಿಯಮ 1ರ ಉಪ ನಿಯಮ (3)ರಲ್ಲಿ "ಮೃತ ಸರ್ಕಾರಿ ನೌಕರಿ" ಎಂಬ ಪದಗಳ ನಂತರ "ಅಥವಾ ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರ" ಎಂಬ ಪದಗಳನ್ನು ಸೇರಿಸತಕ್ಕದ್ದು.

3. **ಹೊಸನಿಯಮ 3ಅ ರ ಸೇರ್ಪಡೆ:–** ಸದರಿ ನಿಯಮಗಳ ನಿಯಮ 3ರ ನಂತರ ಈ ಕೆಳಕಂಡದ್ದನ್ನು ಸೇರಿಸತಕ್ಕದ್ದು.

ಅಂದರೆ:–

3ಅ. ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರರ ಅವಲಂಬಿತರ ನೇಮಕಾತಿ

(1) ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರರ ಅವಲಂಬಿತರು ಈ ನಿಯಮಗಳ ವ್ಯಾಪಕತೆಗೆ ಹಾನಿ ಉಂಟು ಮಾಡದಂತೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಹೊಂದಲು ಅರ್ಹರಾಗುತ್ತಾರೆ.

(2) ಈ ನಿಯಮಗಳ ನಿಯಮ 9ನ್ನು ಹೊರತುಪಡಿಸಿ, ಮೃತ ಸರ್ಕಾರಿ ನೌಕರನ ಅವಲಂಬಿತರಿಗೆ ಅನ್ವಯವಾಗುವ ಅರ್ಹತೆಯ ಎಲ್ಲಾ ಷರತ್ತುಗಳು, ನೇಮಕಾತಿ ನಿಬಂಧನೆಗಳು ಮತ್ತು ಅರ್ಜಿ ಸಲ್ಲಿಸುವ ಮತ್ತು ನೇಮಕಾತಿ ಮಾಡುವ ಕಾರ್ಯವಿಧಾನದ ನಿಯಮಗಳು, ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತಿ ಹೊಂದಿದ ಸರ್ಕಾರಿ ನೌಕರನ ಅವಲಂಬಿತರಿಗೆ, ನೌಕರನು ನಿವೃತ್ತಿ ಹೊಂದಿದ ದಿನಾಂಕದಿಂದ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗುತ್ತದೆ.

ಪರಂತು, ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) (ಆರನೇ ತಿದ್ದುಪಡಿ) ನಿಯಮಗಳು, 2011 ಜಾರಿಗೆ ಬಂದ ದಿನಾಂಕದಂದು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರರ ಅರ್ಹ ಅವಲಂಬಿತರು, ಸದರಿ ನಿಯಮಗಳು ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷದೊಳಗೆ ಅರ್ಜಿ ಸಲ್ಲಿಸತಕ್ಕದ್ದು.

ವಿವರಣೆ: ಈ ನಿಯಮಗಳ ಉದ್ದೇಶಕ್ಕಾಗಿ:–

(i) "ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರ" ಎಂದರೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ರಚಿತವಾದ ವೈದ್ಯಕೀಯ ಮಂಡಳಿಯು ನೀಡಿದ ಪ್ರಮಾಣ ಪತ್ರದನ್ವಯ ಸಾರ್ವಜನಿಕ ಸೇವೆಯ ಮೇಲೆ ಕರ್ತವ್ಯದಲ್ಲಿರುವಾಗ ದೈಹಿಕವಾಗಿ ಅಥವಾ ಮಾನಸಿಕವಾಗಿ ಶಾಶ್ವತವಾಗಿ ಅಸಮರ್ಥರಾಗಿ ಕರ್ನಾಟಕ ಸಿವಿಎಲ್ ಸೇವಾ ನಿಯಮಗಳನ್ವಯ 1ನೇ ಜನವರಿ 2010 ರಂದು ಅಥವಾ ತದನಂತರ ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರ.

(ii) "ಕರ್ತವ್ಯದ ಮೇಲಿರುವಾಗ" ಎಂಬ ಪದಗಳು ಮನೆಯಿಂದ ಕರ್ತವ್ಯ ನಿರ್ವಹಿಸುವ ಸ್ಥಳಕ್ಕೆ ಹೋಗಿ ಬರುವ ಪ್ರಯಾಣವನ್ನು ಒಳಗೊಂಡಿರುತ್ತವೆ.

(iii) ಮೃತ ಸರ್ಕಾರಿ ನೌಕರನಿಗೆ ಸಂಬಂಧಸಿದಂತೆ ಪರಿಭಾಷಿಸಿರುವ "ಅವಲಂಬಿತರು" ಮತ್ತು "ಕುಟುಂಬದ ಸದಸ್ಯರು" ಎಂಬ ಪದಗಳು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರರ ಅವಲಂಬಿತರಿಗೂ ಅರ್ಥೈಸಲ್ಪಡತಕ್ಕದ್ದು.

(iv) ಈ ನಿಯಮಗಳಲ್ಲಿ ಮೃತ ಸರ್ಕಾರಿ ನೌಕರನಿಗೆ ಸಂಬಂಧಿಸಿದಂತೆ ನಮೂದಾಗಿರುವ "ವಿಧವೆ" ಅಥವಾ "ವಿಧುರ" ಎಂಬ ಪದಗಳು ವೈದ್ಯಕೀಯ ಕಾರಣಗಳ ಮೇಲೆ ನಿವೃತ್ತರಾದ ಸರ್ಕಾರಿ ನೌಕರರ ಪ್ರಕರಣಗಳಲ್ಲಿ ಕ್ರಮವಾಗಿ 'ಪತ್ನಿ' ಅಥವಾ 'ಪತಿ' ಎಂದು ಪರಿಗಣಿಸಲ್ಪಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ದೇವರಾಜು
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1)

DEVARAJU
Under Secretary to Government,
Department of Personnel and Administrative
Reforms (Service rules-1)

PERSONNEL AND ADMINISTRATIVE REFORMS SECRETARIAT

NOTIFICATION

NO. DPAR 26 SCR 2011, Bangalore, dated: 29.10.2011

Whereas the draft of the following rules further to amend the Karnataka Civil Services (Direct Recruitment by Competitive Examinations and Selection) (General) Rules, 2006, was published as required by clause (a) of sub-section (2) of section 3 of the Karnataka State Civil Services Act. 1978 (Karnataka Act 14 of 1990) in Notification No. DPAR 26 SCR 2011 dated:21.09.2011 in part IV A (P.R.No. 845) of the Karnataka Gazette dated: 21.09.2011 inviting objections and suggestions from all persons likely to be affected thereby within fifteen days from the date of its publication in the Official Gazette.

Whereas, the said Gazette was made available to the public on 21.09.2011.

And whereas, no objections and suggestions have been received in this behalf by the State Government.

Now, therefore, in exerclse of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990) the Government of Karnataka hereby makes the following rules, namely:-

RULES

1. **Title and Commencement:-** (1) These rules may be called the Karnataka Civil Services (Direct Recruitment by Competitive Examinations and Selection) (General) (Fifth Amendment) Rules, 2011.

(2) They shall come into force from the date of their publication in the Official Gazette.

2 Amendment of rule 8:- In the Karnataka Civil Services (Direct Recruitment by Competitive Examinations and Selection) (General) Rules, 2006 (hereafter referred to as the said rules) in rule 8, after sub-rule (3) the following shall be inserted namely:-

(4) The Commission shall in accordance with the provisions of sub-rule (1) or (2) as the case may be aslo prepare an Additional List of candidates not included in

the list prepared under sub rule (1) or (2) in which the number of candidates to be included shall as far as possible not exceeding fifty percent of the vacancies in respect of technical posts and ten percent of the vacancies in respect of non-technical posts notified by taking into consideration the policy of reservation in direct recruitment (both vertical & horizontal reservation) and the same shall be inforce for a period of one year from the date of publication.

3. Amendment of rule 9:- In rule 9 of the said rules, for sub-rule (3), the following shall be substituted, namely:-

"(3)The candidateds whose names are included in the additional list prepared under sub-rule (4) of rule 8 may be similarly appointed only in case and to the extent of candidates whose names are included in the list prepared under sub-rule (1) or (2) of rule 8 and to whom order of appointment has been issued do not assume charge of the post to which they are appointed by the appointing authority within the joining time prescribed."

4.Amendment of rule 10:- In rule 10 of the said rules after sub-rule (3), the following shall be inserted, namely:-

"(4)The Appointing Authority shall in accordance with the provisions of these rules, also prepare an Additional List of candidates not included in the final list in which the number

of candidates to be included shall as far as possible not exceeding ten percent of the vacancies notified by taking into consideration the policy of reservation in direct recruitment (both vertical & horizontal reservation).

(5)The candidates whose names are included in the additional list prepared under sub-rule (4) may be similarly appointed only in case and to the extent of candidates whose names are included in the final list and to whom order of appointment has been issued do nto assume charge of the post to which they are appointed by the appointing authority within the joining time prescribed."

By order and in the name of the Governor of Karnataka,

DEVARAJU

Under Secretary to Government,

Department of Personnel and Administrative Reforms (Service rules-1)

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು
ವಿಶೇಷ ಪತ್ರಿಕೆ

ಭಾಗ–IV-A	ಬೆಂಗಳೂರು, ಬುಧವಾರ, ನವೆಂಬರ್ 21,. 2012 (ಕಾರ್ತೀಕ 30 ಶಕ ವರ್ಷ 1934)	ನಂ.835

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 88 ಸೇನಿಡಿ 2012, ಬೆಂಗಳೂರು ದಿನಾಂಕ: 20ನೇ ನವೆಂಬರ್ 2012

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ರ (1990ರ ಕರ್ನಾಟಕ ಅಧಿನಿಯಮ 14) 3ನೇ ಪ್ರಕರಣದ (2)ನೇ ಉಪಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ ಅಧಿಸೂಚನೆ ಸಂಖ್ಯೆ: ಸಿಆಸುಇ 88 ಸೇನಿಡಿ 2012, ದಿನಾಂಕ 15ನೇ ಸೆಪ್ಟೆಂಬರ್ 2012ರಲ್ಲಿ ಕರ್ನಾಟಕ ಸರ್ಕಾರದ ಸಚಿವಾಲಯ ಸೇವೆಗಳು (ನೇಮಕಾತಿ) (ಎರಡನೇ ತಿದ್ದುಪಡಿ) ನಿಯಮಗಳು, 2012ರ ಕರಡನ್ನು ಕರ್ನಾಟಕ ರಾಜ್ಯಪತ್ರ ವಿಶೇಷ ಪತ್ರಿಕೆಯ ಭಾಗ IV-Aರಲ್ಲಿ (ವಿಶೇಷ ಸಂಚಿಕೆ) ದಿನಾಂಕ ಸೆಪ್ಟೆಂಬರ್ 15, 2012 ಪ್ರಕಟಿಸಿ, ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಯ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿರುವುದರಿಂದ;

ಮತ್ತು ಸದರಿ ರಾಜ್ಯ ಪತ್ರವನ್ನು 2012ರ ಸೆಪ್ಟೆಂಬರ್ 15ರಂದುಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ನಿಗದಿತ ಅವಧಿಯಲ್ಲಿ ಯಾವುದೇ ಸಲಹೆ ಅಥವಾ ಆಕ್ಷೇಪಣೆಗಳು ಸ್ವೀಕರಿಸಿಲ್ಲದಿರುವುದರಿಂದ;

ಈಗ ಕರ್ನಾಟಕ ಸರ್ಕಾರವು, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ರ (1990ರ ಕರ್ನಾಟಕ ಅಧಿನಿಯಮ 14) 3ನೇ ಪ್ರಕರಣದ (1) ನೇ ಉಪ ಪ್ರಕರಣವನ್ನು 8ನೇ ಪ್ರಕರಣದೊಡನೆ ಓದಿಕೊಂಡಂತೆ ಇದರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಈ ಮೂಲಕ ಈ ಕೆಳಗಿನಂತೆ ನಿಯಮಗಳನ್ನು ರಚಿಸುತ್ತದೆ, ಎಂದರೆ:-

ನಿಯಮಗಳು

1 ಹೆಸರು ಮತ್ತು ಪ್ರಾರಂಭ:- (1) ಈ ನಿಯಮಗಳನ್ನು ಕರ್ನಾಟಕ ಸರ್ಕಾರ ಸಚಿವಾಲಯ ಸೇವೆಗಳು (ನೇಮಕಾತಿ) (ಎರಡನೇ ತಿದ್ದುಪಡಿ) ನಿಯಮಗಳು, 2012 ಎಂದು ಕರೆಯತಕ್ಕದ್ದು.

(2)ಈ ನಿಯಮಗಳು ಅವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದು.

2. ಅನುಸೂಚಿಯ ತಿದ್ದುಪಡಿ:- ಕರ್ನಾಟಕ ಸರ್ಕಾರದ ಸಚಿವಾಲಯ ಸೇವೆಗಳು (ನೇಮಕಾತಿ) ನಿಯಮಗಳು, 1992ರ ಅನುಸೂಚಿಯಲ್ಲಿ III ಯೋಜನೆ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಯೋಜನಾ ವಿಭಾಗದ ಕಾರ್ಯನಿರ್ವಹಣಾ ಶಾಖೆಗಳು ಶೀರ್ಷಿಕೆಯಡಿಯಲ್ಲಿ, ಕ್ರಮ ಸಂಖ್ಯೆ: 1ರಲ್ಲಿಯ 'ಹಿರಿಯ ನಿರ್ದೇಶಕ' ಎಂಬ ಹುದ್ದೆಯ ಪ್ರವರ್ಗಕ್ಕೆ ಸಂಬಂಧಿಸಿದ ನಮೂದುಗಳಲ್ಲಿ (4)ನೇ ಅಂಕಣದಲ್ಲಿನ ನಮೂದುಗಳ ತರುವಾಯ ಈ ಮುಂದಿನದನ್ನು ಕೊನೆಯಲ್ಲಿ ಸೇರಿಸತಕ್ಕದ್ದು, ಎಂದರೆ:-

"ಪರಂತು ಆರು ವರ್ಷಗಳಿಗಿಂತ ಕಡಿಮೆ ಇಲ್ಲದಷ್ಟು ಅವಧಿಯ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳು ಬಡ್ತಿಗೆ ಲಭ್ಯವಿಲ್ಲದಿದ್ದಲ್ಲಿ ನಾಲ್ಕು

ವರ್ಷಗಳಿಗಿಂತ ಕಡಿಮೆ ಇಲ್ಲದಷ್ಟು ಅವಧಿಯ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳನ್ನು ಬಡ್ತಿಗೆ ಪರಿಗಣಿಸಬಹುದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಡಿ.ನಾಗೇಶ್ ಪಾಟಕ್

ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು–2)

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 90 ಸೇಅನೇ 2012

ಕರ್ನಾಟಕ ಸರ್ಕಾರದ
ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 18.10.2012.

ಅಧಿಸೂಚನೆ

ಕರ್ನಾಟಕ ಸಿವಿಲ್ ಸೇವಾ (ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವ್ಯಕ್ತಿಗಳ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳಲ್ಲಿ ಮೃತಪಡುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವ್ಯಕ್ತಿಗಳ ಅವಲಂಬಿತರಿಗೆ ಅನುಕಂಪದ ಆಧಾರದ ನೇಮಕಾತಿ) (ವಿಶೇಷ) ನಿಯಮಗಳು, 1999 ಇದನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕೆ ದಿನಾಂಕ: 06..09.2012 ರ ಅಧಿಸೂಚನೆ ಸಂಖ್ಯೆ: ಸಿಆಸುಇ 90 ಸೇಅನೇ 2012ರಲ್ಲಿ ಪ್ರಕಟಿಸಿರುವ ಈ ಮುಂದಿನ ನಿಯಮಗಳ

ಕರಡನ್ನು ಅಧಿಕೃತ ರಾಜ್ಯಪತ್ರದಲ್ಲಿ ಇದರ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಅದರಿಂದ ಬಾಧಿತರಾಗುವ ಸಂಭವವಿರುವ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಆಹ್ವಾನಿಸಿ ದಿನಾಂಕ: 07.09.2012ರ ಕರ್ನಾಟಕ ರಾಜ್ಯಪತ್ರದ ಭಾಗ– ivಎ (ಪಿ.ಆರ್.ಸಂ: 631)ರಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14)ರ 3ನೇ ಪ್ರಕರಣದ (2) ನೇ ಉಪ ಪ್ರಕರಣದ (ಎ) ಖಂಡದ ಮೂಲಕ ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ;

ಸದರಿ ರಾಜ್ಯಪತ್ರವನ್ನು ದಿನಾಂಕ: 07.09.2012 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸದರಿ ಕರಡಿನ ಬಗ್ಗೆ ಯಾವುದೇ ಆಕ್ಷೇಪಣೆ/ಸಲಹೆಗಳು ಸ್ವೀಕೃತವಾಗದಿರುವುದರಿಂದ;

ಈಗ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ, 14)ರ 8ನೇ ಪ್ರಕರಣದೊಂದಿಗೆ ಓದಿಕೊಂಡ 3ನೇ ಪ್ರಕರಣದ (1) ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:–

ನಿಯಮಗಳು

1. **ಸಂಕ್ಷಿಪ್ತ ಶಿರೋನಾಮೆ ಮತ್ತು ಪ್ರಾರಂಭ:–** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ಪರಿಸಿಷ್ಠ ಜಾತಿ / ಪರಿಶಿಷ್ಠ ಪಂಗಡದ ವ್ಯಕ್ತಿಗಳ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳಲ್ಲಿ ಮೃತಪಡುವ ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡದ ವ್ಯಕ್ತಿಗಳ ಅವಲಂಬಿತರಿಗೆ ಅನುಕಂಪದ ಆಧಾರದ ನೇಮಕಾತಿ) (ವಿಶೇಷ) (ತಿದ್ದುಪಡಿ) ನಿಯಮಗಳು, 2012 ಎಂದು ಕರೆಯತಕ್ಕದ್ದು.

(2)ಇವು, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ನಿಯಮ 4ಕ್ಕೆ ತಿದ್ದುಪಡಿ:– ಕರ್ನಾಟಕ ಸಿವಿಲ್ ಸೇವಾ (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವ್ಯಕ್ತಿಗಳ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳಲ್ಲಿ ಮೃತಪಡುವ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ವ್ಯಕ್ತಿಗಳ ಅವಲಂಬಿತರಿಗೆ ಅನುಕಂಪದ ಆಧಾರದ ನೇಮಕಾತಿ) (ವಿಶೇಷ) ನಿಯಮಗಳು, 1999ರ ನಿಯಮ 4 ರಲ್ಲಿ;

(i) ಉಪನಿಯಮ (2) ಮತ್ತು ಸಂಬಂಧಿಸಿದ ನಮೂದುಗಳಿಗೆ ಬದಲಾಗಿ ಈ ಕೆಳಕಂಡವುಗಳನ್ನು ಪ್ರತಿಸ್ಥಾಪಿಸತಕ್ಕದ್ದು, ಅಂದರೆ:–

(2) ಜಿಲ್ಲಾಧಿಕಾರಿಯವರು ಅರ್ಜಿಗಳು ಸ್ವೀಕೃತವಾದ ನಂತರ ಅಂತಹ ಅರ್ಜಿಯ ವಿವರಗಳನ್ನು ವಾಸ್ತವಾಂಶಗಳೊಂದಿಗೆ ಪರಿಶೀಲಿಸತಕ್ಕದ್ದು ಮತ್ತು ಸಂಬಂಧಪಟ್ಟ ಕಂದಾಯ ವಿಭಾಗದ ಪ್ರಾದೇಶಿಕ ಆಯುಕ್ತರಿಗೆ ಅಂತಹ ಅರ್ಜಿಗಳು ಸ್ವೀಕೃತವಾದ 3 ತಿಂಗಳೊಳಗೆ ಶಿಫಾರಸ್ಸು ಮಾಡತಕ್ಕದ್ದು.

(ii) ಉಪ ನಿಯಮ (2) ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ನಂತರ ಈ ಕೆಳಗಿನವುಗಳನ್ನು ಸೇರಿಸತಕ್ಕದ್ದು, ಅಂದರೆ:–

(1) ಸಂಬಂಧಪಟ್ಟ ಕಂದಾಯ ವಿಭಾಗದ ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿಯವರ ಶಿಫಾರಸ್ಸುಗಳನ್ನು ಪರಿಶೀಲಿಸತಕ್ಕದ್ದು ಮತ್ತು ಅವರಿಗೆ ಅರ್ಜಿದಾರರು ಈ ನಿಯಮಗಳಡಿ ನೇಮಕಾತಿ ಹೊಂದಲು ಅರ್ಹರೆಂದು ಕಂಡುಬಂದಲ್ಲಿ, ಅದನ್ನು ಯಾವುದೇ ಇಲಾಖೆಯಲ್ಲಿನ ಖಾಲಿ ಹುದ್ದೆಗಳ ಲಭ್ಯತೆಗೆ ಒಳಪಟ್ಟು ಸಂಬಂಧಪಟ್ಟ ಯಾವುದಾದರೂ ಒಬ್ಬ ಇಲಾಖಾ ಮುಖ್ಯಸ್ಥರಿಗೆ ಕಳುಹಿಸತಕ್ಕದ್ದು.

(iii) ಉಪ ನಿಯಮ (4)ರಲ್ಲಿ " ಜಿಲ್ಲಾಧಿಕಾರಿಗಳು" ಎಂಬ ಪದಗಳ ಬದಲಾಗಿ "ಪ್ರಾದೇಶಿಕ ಆಯುಕ್ತರು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

3.ನಿಯಮ 5ಕ್ಕೆ ತಿದ್ದುಪಡಿ:– ಸದರಿ ನಿಯಮಗಳ ನಿಯಮ 5ರ ಉಪ ನಿಯಮ (1)ರಲ್ಲಿ "ಇಲಾಖಾ ಮುಖ್ಯಸ್ಥರು" ಎಂಬ ಪದಗಳ ಬದಲಾಗಿ " ಸಂಬಂಧಪಟ್ಟ ಕಂದಾಯ ವಿಭಾಗದ ಪ್ರಾದೇಶಿಕ ಆಯುಕ್ತರು" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ: ಮಂಗಳ ಜಿ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು–1)

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ – ಇದನ್ನು ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರ 1000 ಪ್ರತಿಗಳನ್ನು ಸಿಆಸು ಇಲಾಖೆ (ಸೇವಾ ನಿಯಮಗಳು–ಬಿ) ಶಾಖೆಗೆ ಒದಗಿಸಲು.

ಪ್ರತಿ:

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿ.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು.
5) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
6) ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು.

7) ಎಲ್ಲಾ ಇಲಾಖಾ ಮುಖ್ಯಸ್ಥರು.

8) ಎಲ್ಲಾ ಪ್ರಾದೇಶಿಕ ಆಯುಕ್ತರು.

9) ಎಲ್ಲಾ ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

10) *ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ಪರಿಷತ್ತು, ಬೆಂಗಳೂರು.

11) *ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು.

12) *ಮಹಾ ನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.

13) *ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

14) *ನಿಬಂಧಕರು, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಇಂದಿರಾ ನಗರ, ಬೆಂಗಳೂರು.

15) ಸರ್ಕಾರದ ಎಲ್ಲ ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು.

16) ಸಚಿವಾಲಯದ ಎಲ್ಲಾ ಶಾಖೆಗಳು.

17) 127 ವಾರದ ರಾಜ್ಯಪತ್ರ.

18) ರಕ್ಷಾ ಕಡತ.

(* ಮುಖ ಪತ್ರದೊಂದಿಗೆ)

(ಅಧಿಸೂಚನೆ ಸಂಖ್ಯೆ: ಡಿಪಿಎಆರ್ 90 ಎಸ್‌ಸಿಎ 2012, ದಿನಾಂ: 18–10–2012 ರ ಕನ್ನಡ ತರ್ಜುಮೆ)

ಕರ್ನಾಟಕ ವಿಧಾನಸಭೆ

ಹದಿಮೂರನೇ ವಿಧಾನಸಭೆ
ಹದಿನಾರನೇ ಅಧಿವೇಶನ
ಸಭೆಯ ಮುಂದಿಡಲಾದ ಕಾಗದ ಪತ್ರಗಳ ಪಟ್ಟಿ
(ಎರಡನೇ ಪಟ್ಟಿ)
ಬುಧವಾರ, ದಿನಾಂಕ 06ನೇ ಫೆಬ್ರವರಿ, 2013

I. ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿ) ಅವರ ಪರವಾಗಿ ಶ್ರೀ ಎಸ್. ಸುರೇಶ್‌ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಕಂಪನಿಗಳ ಅಧಿನಿಯಮ 1956 ಕಲಂ 619(ಎ)ರ ಮೇರೆಗೆ

1.ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

2. ಕೊಂಕಣ ರೈಲ್ವೆ ಕಾರ್ಪೊರೇಷನ್‌ನ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

4. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

5. ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

6. ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

7. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

8. ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ಸಂಸ್ಥೆಯ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

9. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಯ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

10. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

11. ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ 2010–11 ಮತ್ತು 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕಕ್ಕಪರಿಶೋಧನಾ ವರದಿ.

ವಿದ್ಯುಚ್ಛಕ್ತಿ ಕಾಯ್ದೆ 2003ರ ಸೆಕ್ಷನ್ 104ರ ಪ್ರಕರಣದ ಮೇರೆಗೆ

1. ಕರ್ನಾಟಕದ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

ll ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿ) (ಕಂದಾಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಗ್ರಾಮೀಣಾಭಿವೃದ್ಧಿ ಇಂಜಿನಿಯರಿಂಗ್, ಗ್ರಾಮೀಣ ನೀರು ಸರಬರಾಜು ಹಾಗೂ ನೈರ್ಮಲ್ಯ ಸಚಿವರು) ಅವರು:

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 262(3)ನೇ ಪ್ರಕರಣದ ಮೇರೆಗೆ:

1. ಕೊಡುಗು ಜಿಲ್ಲಾ ಪಂಚಾಯತ್‌ನ 2010–11 ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ರಾಮನಗರ ಜಿಲ್ಲಾ ಪಂಚಾಯತ್‌ನ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

3. ಗದಗ ಜಿಲ್ಲಾ ಪಂಚಾಯತ್‌ನ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
4. ಕೊಪ್ಪಳ ಜಿಲ್ಲಾ ಪಂಚಾಯತ್‌ನ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
5. ಹಾವೇರಿ ಜಿಲ್ಲಾ ಪಂಚಾಯತ್‌ನ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
6. ಮಂಡ್ಯ ಜಿಲ್ಲಾ ಪಂಚಾಯತ್‌ನ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
7. ಮೈಸೂರು ಜಿಲ್ಲಾ ಪಂಚಾಯತ್‌ನ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
8. ಬೀದರ್ ಜಿಲ್ಲಾ ಪಂಚಾಯತ್‌ನ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
9. ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತ್‌ನ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
10. ವಿಜಾಪುರ ಜಿಲ್ಲಾ ಪಂಚಾಯತ್‌ನ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
11. ಕೋಲಾರ ಜಿಲ್ಲಾ ಪಂಚಾಯತ್‌ನ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
12. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
13. ಬೆಳಗಾವಿ ಜಿಲ್ಲಾ ಪಂಚಾಯತ್‌ನ 2010–11ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

IIIಶ್ರೀ ಆರ್. ಅಶೋಕ್ (ಉಪ ಮುಖ್ಯಮಂತ್ರಿ) (ಗೃಹ ಮತ್ತು ಸಾರಿಗೆ ಸಚಿವರು) ಅವರ ಪರವಾಗಿ ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರದ ಸಚಿವರು:

ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗಳ ಅಧಿನಿಯಮ 1950ರ ಕಲಂ 35(2) ಮತ್ತು 33(4)ರ ಪ್ರಕರಣದ ಮೇರೆಗೆ:

1. ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 2011–12 ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
3. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ 2011–12ನೇ ಸಾಲಿನ ವಾರ್ಷಿಕ ಆಡಳಿತ ವರದಿ.
4. ವಾಯುವ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

IVಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) ಅವರು:–

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ 1987ರ 48(5) ಪ್ರಕರಣದ ಮೇರೆಗೆ:

1. ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
3. ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
4. ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
5. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

ಕಂಪನಿಗಳ ಅಧಿನಿಯಮ 1956ರ ಕಲಂ 619(ಎ)ರ ಮೇರೆಗೆ

1. ಬೆಂಗಳೂರು ಮೆಟ್ರೋ ರೈಲು ಕಾರ್ಪೋರೇಷನ್ ಲಿಮಿಟೆಡ್‌ನ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

Vಶ್ರೀ ಉಮೇಶ್. ವಿ ಕತ್ತಿ(ಕೃಷಿ ಸಚಿವರು) ಅವರ ಪರವಾಗಿ ಶ್ರೀ ಎಸ್. ಸುರೇಶ್‌ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು: 1956 ಕಂಪನಿಗಳ ಅಧಿನಿಯಮ 619(ಎ)ರ ಮೇರೆಗೆ:

1. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ರಾಜ್ಯ ಬೀಜ ಪ್ರಮಾಣ ಸಂಸ್ಥೆಯ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ 2009ರ ಕಲಂ 57ರ ಮೇರೆಗೆ:

1. ರಾಯಚೂರು ಕೃಷಿ ವಿಶ್ವವಿದ್ಯಾಲಯದ 2011-12ನೇ ಸಾಲಿನ ವಾರ್ಷಿಕ ವರದಿ.

VIಶ್ರೀ ಬಸವರಾಜ್ ಬೊಮ್ಮಾಯಿ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) ಅವರ ಪರವಾಗಿ ಶ್ರೀ ಎಸ್. ಸುರೇಶ್‌ಕುಮಾರ್(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಕಂಪನಿಗಳ ಅಧಿನಿಯಮ 1956ರ ಕಲಂ 619(ಎ)ರ ಮೇರೆಗೆ:

1. ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ 2011-12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕಾವೇರಿ ನೀರಾವರಿ ನಿಗಮದ 2011-12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

ಕಾಡಾ ಅಧಿನಿಯಮ 1980ರ ಕಲಂ 25ರ ಮೇರೆಗೆ:

1. ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ನೀರಾವರಿ ಯೋಜನೆಗಳ ವಲಯ, ಗುಲ್ಬರ್ಗಾ ಇದರ 2011-12ನೇ ಸಾಲಿನ ವಾರ್ಷಿಕ ವರದಿ.

VIIಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) ಅವರ ಪರವಾಗಿ ಶ್ರೀ ಎಸ್. ಸುರೇಶ್‌ಕುಮಾರ್(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): 1956ರ ಕಂಪನಿಗಳ ಅಧಿನಿಯಮ ಕಲಂ 619(ಎ) ಪ್ರಕರಣದ ಮೇರೆಗೆ:

1. ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಮೈಸೂರು ಕಾಗದ ಕಾರ್ಖಾನೆ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
3. ಕರ್ನಾಟಕ ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿ ಪ್ರೈ ಲಿಮಿಟೆಡ್‌ನ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
4. ದಿ ಮೈಸೂರು ಕ್ರೋಮ್ ಟ್ಯಾನಿಂಗ್ ಕಂಪನಿ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
5. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
6. ಮೈಸೂರು ಪೆಯಿಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್‌ನ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
7. ಮೈಸೂರು ಮಿನರಲ್ಸ್ ಸಂಸ್ಥೆಯ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
8. ಕರ್ನಾಟಕ ಟ್ರಸ್ಟೀ ಕಂಪನಿ ಪ್ರೈ ಲಿಮಿಟೆಡ್‌ನ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
9. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
10. ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
11. ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಮಗ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

VIIIಶ್ರೀ ವಿ. ಸೋಮಣ್ಣ (ವಸತಿ ಸಚಿವರು) ಅವರ ಪರವಾಗಿ ಶ್ರೀ ಎಸ್. ಸುರೇಶ್‌ಕುಮಾರ್(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಕರ್ನಾಟಕ ಗೃಹ ಮಂಡಳಿಯ ಅಧಿನಿಯಮ 1962ರ ಪ್ರಕರಣ 55(2)ರ ಮೇರೆಗೆ:

1. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ 2010–11 ಮತ್ತು 2011–12ನೇ ಸಾಲಿನ ವಾರ್ಷಿಕ ವರದಿ.

IXಶ್ರೀ ಸಿ.ಪಿ. ಯೋಗಿಶ್ವರ್ (ಅರಣ್ಯ ಸಚಿವರು) ಅವರ ಪರವಾಗಿ ಶ್ರೀ ಎಸ್. ಸುರೇಶ್‌ಕುಮಾರ್(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):
1956ರ ಕಂಪನಿಗಳ ಅಧಿನಿಯಮ 619(4)ರ ಮೇರೆಗೆ:

1. ದಿ ಮೈಸೂರು ಮ್ಯಾಚ್ ಕಂಪನಿ ಲಿಮಿಟೆಡ್‌ನ 2010–11 ಮತ್ತು 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

Xಶ್ರೀ ಎಸ್.ಎ. ರವಿಂದ್ರನಾಥ್ (ಸಕ್ಕರೆ ಮತ್ತು ತೋಟಗಾರಿಕೆ ಸಚಿವರು) ಅವರು:
1956ರ ಕಂಪನಿಗಳ ಅಧಿನಿಯಮ 619ಎ ಪ್ರಕರಣದ ಮೇರೆಗೆ:

1. ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

ತೋಟಗಾರಿಕೆ ವಿಜ್ಞಾನಿಗಳ ಕಾಯ್ದೆ 2009ರ ಕಲಂ 57ರ ರೀತ್ಯಾ

1. ತೋಟಗಾರಿಕೆ ವಿಜ್ಞಾನಿಗಳ ವಿಶ್ವಿವಿದ್ಯಾಲಯ, ಬಾಗಲಕೋಟೆ ಇದರ 2011–12ನೇ ಸಾಲಿನ ವಾರ್ಷಿಕ ವರದಿ.

XI ಶ್ರೀ ರೇವೂನಾಯಕ್ ಬೆಳಮಗಿ (ಲೀಕಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಹಾಗೂ ಪಶು ಸಂಗೋಪನೆ ಸಚಿವರು) ಅವರು:

ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕಾಯ್ದೆ 2004ರ ಕಲಂ 43(3)ರ ಮೇರೆಗೆ

1. ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾಲಯ, ಬೀದರ್‌ನ 2011–12ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

XII ಶ್ರೀ ಎ.ನಾರಾಯಣಸ್ವಾಮಿ (ಸಮಾಜ ಕಲ್ಯಾಣ, ಬಂಧೀಖಾನೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು) ಅವರ ಪರವಾಗಿ ಶ್ರೀ ಎಸ್. ಸುರೇಶ್‌ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

1956 ಕಂಪನಿ ಕಾಯ್ದೆಯ 619ಎರ ಮೆರೆಗೆ

1. ಡಿ. ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

2. ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

XIII ಶ್ರೀ ಆರ್. ವರ್ತೂರ್ ಪ್ರಕಾಶ್ (ಜವಳಿ ಸಚಿವರು) ಅವರ ಪರವಾಗಿ ಶ್ರೀ ಎಸ್. ಸುರೇಶ್‌ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

1956ರ ಕಂಪನಿ ಅಧಿನಿಯಮದ 619(ಎ) ಪ್ರಕರಣದ ಮೇರೆಗೆ:

1. ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಮಗ ನಿಯಮಿತದ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

XIV ಶ್ರೀ ಸಿ.ಟಿ. ರವಿ (ಉನ್ನತ ಶಿಕ್ಷಣ ಸಚಿವರು) ಅವರು:

ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಕಲಂ 47(4)ರ ಮೇರೆಗೆ:

1. ಮಂಗಳೂರು ವಿಶ್ವವಿದ್ಯಾಲಯದ 2009–10ನೇ ಸಾಲಿನ ಲೆಕ್ಕಪರಿಶೋಧನಾ ವರದಿ.
2. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇದರ 2009–10ನೇ ಸಾಲಿನ ಲೆಕ್ಕಪರಿಶೋಧನೆಯ ಅನುಸರಣಾ ವರದಿ.
3. ಕುವೆಂಪು ವಿಶ್ವವಿದ್ಯಾಲಯದ 2008–09, 2009–10ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಪಾಲನ ವರದಿ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅಧಿನಿಯಮ 1992ರ ಪ್ರಕರಣ 26(3)ರ ಮೇರೆಗೆ:

1. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ 2010–11ನೇ ಸಾಲಿನ ವಾರ್ಷಿಕ ವರದಿ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯದ ಅಧಿನಿಯಮ 1994ರ ಕಲಂ 25(2) ಮತ್ತು 28(3)ರ ಮೇರೆಗೆ:

1. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 2009–10 ಮತ್ತು 2010–11ನೇ ಸಾಲುಗಳ ಲೆಕ್ಕಪರಿಶೋಧನಾ ವರದಿ ಹಾಗೂ 2011–12ನೇ ಸಾಲಿನ ವಾರ್ಷಿಕ ವರದಿ.

XVಶ್ರೀ ಆನಂದ್ ಸಿಂಗ್ (ಪ್ರವಾಸೋದ್ಯಮ ಸಚಿವರು) ಅವರ ಪರವಾಗಿ ಶ್ರೀ ಎಸ್. ಸುರೇಶ್‌ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):
1956ರ ಕಂಪನಿಗಳ ಅಧಿನಿಯಮ 619ಎ ಮೇರೆಗೆ:

1. ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯ 2011–12ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ.

ಅಧ್ಯಕ್ಷರು: ಮಂಡಿಸಲಾಯಿತು. ಈಗ ಶೂನ್ಯವೇಳೆ. ಶ್ರೀ ಸೈಯ್ಯದ್ ಯಾಸೀನ್‌ರವರು, ಮಾತನಾಡಿ

3. ಅಧ್ಯಕ್ಷರ ಅಪ್ಪಣೆ ಮೇರೆ ಪ್ರಸ್ತಾಪಿಸಲಾದ ವಿಷಯಗಳು

1. Subject: Release the water from TLBC

Sir syed Yasin (Raichur): Sir, regarding this drinking water there is acute shortage in Raichur.ಏಕೆಂದರೆ, 30% of